

ಬೆಳಸಿದ್ದು. "ಕೆಂಪು ಪಾದಗಳ ಕಾಲ್ಕಡಗ – ನಿನ್ನ ಪಾದಾರವಿಂದಗಳೇ ನನ್ನ ಕಾಪಾಡಬೇಕು" – ಎಂದು ಮಾತು ಮೊಳೆಯದ ದಿನದಿಂದ ಕಲಿಸಿದ್ದು ನೀವಲ್ಲವೇ ಅಪ್ಪ? ಶ್ರೀರಂಗ ಕೇಳಿಸಿಕೊಳ್ಳಬೇಕಂಬ ನಂಬಿಕೆಯಲ್ಲಿ ಅಲ್ಲವೇ ಇದನ್ನು ಮಾಡಿದ್ದು. ನನ್ನ ದನಿ ಆ ನಂಬಿಕೆಗೆ ಕೇಳಿಸಿತು ಅಪ್ಪ. ನಾನು ತೊಡಿಸಿದ ಮಾಲೆಯನ್ನು ಅವನು ನನಗೆ ಮುಡಿಸಿದ ಎಂದರೆ ಯಾಕಪ್ಪಾ ನಂಬಲು ನಿರಾಕರಿಸುತ್ತೀರಿ?"

"ಸ್ತುತಿ ಹಾಡುವುದಕ್ಕೂ ಬದುಕುವುದಕ್ಕೂ ವ್ಯತ್ಯಾಸವಿದೆ ಮಗಳೇ."

"ಸ್ತುತಿಸುವುದೇ ಸುಖವಾಗಿ ಬಾಳಲು ಅಲ್ಲವೇ ಅಪ್ಪ."

"ಅದರಲ್ಲೇನು ಸಂಶಯ?"

"ನನ್ನ ಸ್ತುತಿಯ ಹಾಡು ನನ್ನನ್ನು ಅವನ ಮೇಲೆ ಮೋಹಗೊಳ್ಳುವಂತೆ ಮಾಡಿತು ಅಪ್ಪ. ನಾವು ಮಾಲೆ ಬದಲಾಯಿಸಿ ಕೊಂಡೆವು."

"ಆಂಡಾಳ್, ನೀನು ಅತಿಯಾಗಿ ಭಾವಿಸುತ್ತಿದ್ದೀಯಾ. ನನಗೆ ಭಯವಾಗುತ್ತಿದೆ ಮಗಳೇ..." ಪೆರಿಯಾಳ್ವಾರ್ ನಡುಗುವ ದನಿಯಲ್ಲಿ ಹೇಳಿದರು.

"ಆ ನಾರಾಯಣ ನನ್ನನ್ನು ಕೈಬಿಡುವುದಿಲ್ಲ. ಅವನು ನನ್ನ ನಾಥ. ನನ್ನ ದೇವರು. ನನ್ನ ಒಲವು. ನನ್ನ ಪ್ರೀತಿ."

"ಬಾಯಿಗೆ ಬಂದಂತೆ ಮಾತನಾಡಬೇಡ ಆಂಡಾಳ್" ಪೆರಿಯಾಳ್ವಾರ್ ಕೋಪವನ್ನು ಅಡಗಿಸಲು ಯತ್ನಿಸುತ್ತಾ ಬಲಹೀನವಾದ ದನಿಯಲ್ಲಿ ಹೇಳಿದರು. ಅವರ ತೋಳುಗಳು ನಡುಗಿದವು. ಹೊಟ್ಟೆ ಕುಗ್ಗಿತು.

"ಅಪ್ಪ, ನಿಮ್ಮನ್ನು ಮೋಸಮಾಡುವ ಉದ್ದೇಶ ನನಗಿಲ್ಲ. ನಿಜ ಹೇಳಿದೆ, ಅಷ್ಟೇ. ಕೃಷ್ಣನನ್ನು ನಾನು ಕಂಡುಕೊಂಡ ಕ್ಷಣದಿಂದ ಅನೇಕ ಜನ್ಮಗಳಿಂದ ನಾನೂ ಅವನೂ ಒಂದಾಗಿ ಜೀವಿಸುವಂತೆಯೇ ಭಾವಿಸುತ್ತೇನೆ. ನನ್ನ ಎದೆ ಬಾನಂತೆ ಬಿರಿಯುತಿದೆ. ಹೇರಳವಾದ ಶಿಖರಗಳ ತುದಿಯನ್ನು ದಾಟಿ ಆ ಬಾನು ಬಿರಿಯುತಿದೆ. ಒಂದು ದೊಡ್ಡ ಜ್ವಾಲೆಯಾಗಿ ಅಲ್ಲಿ ಕೃಷ್ಣನ ಆಕಾರ ಏಳುತಿದೆ. ನಿಂತು ನೆಲೆಯಾಗಿ ಕಣ್ಣನ್ನು ಕೋರೈಸುವಂತೆ ಪ್ರಕಾಶವಾಗಿ ಉರಿಯುತಿದೆ ಆ ಸೊಡರು. ಆ ಸೊಡರಿನ ತುದಿಯಾಗಿ ನಾನು ತೇಲುತ್ತಿದ್ದೇನೆ. ಈ ಭಾವನೆಯನ್ನು ನಾನು ಹೇಗೆ ಪಡೆದುಕೊಂಡೆ? ಗೊತ್ತಿಲ್ಲ. ಹೂಗಳನ್ನು ಕಟ್ಟುತ್ತಿರುವಾಗ ಇದ್ದಕ್ಕಿದ್ದಂತೆ ಒಂದು ಕ್ಷಣದಲ್ಲಿ ಹಾಗೆ ಭಾವಿಸಿದೆ. ಅಪ್ಪ, ಈ ಕುಟೀರದಲ್ಲಿ ಏನೋ ಹಾಡುಗಳನ್ನು ಗುಣಗುಣಿಸುತ್ತ ಕುಳಿತಿರುವಾಗ ನನ್ನ ಮನಸ್ಸಿನಲ್ಲಿ ಪ್ರವಾಹವಾಗಿ ಉಕ್ಕಿಹರಿಯಿತು. ಆ ಕೃಷ್ಣನೇ ನನ್ನನು ಅಪ್ಪಿಕೊಳ್ಳುತ್ತಿದ್ದಾನೆ. ಆ ಕೃಷ್ಣನೇ ನನ್ನನ್ನು ಮುದ್ದಾಡುತ್ತಿದ್ದಾನೆ. ಆ ಕೃಷ್ಣನೇ